# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE: 12/3/2020

## ಕೆಟಿಪಿಪಿ ಅನ್ವಯ ಟೆಂಡರ್ ಅವಶ್ಯಕತೆಯಿಲ್ಲ

ವಿಧಾನ ಪರಿಷತ್: ಅನುಷ್ಠಾನ ಮಾಡಲಾದ ಚೆಕ್ ಡ್ಯಾಂಗಳ ವೆಚ್ಚ 5 ಲಕ್ಷ ರು. ಒಳಗಿರುವುದರಿಂದ ಕೆಟಿಪಿಪಿ ಅನ್ವಯ ಟೆಂಡರ್ ಕರೆಯುವ ಅವಶ್ಯಕತೆಯಿಲ್ಲ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ವಿಧಾನ ಪರಿಷತ್ ಸದಸ್ಯ ಅಪ್ಪಾಜಿ ಗೌಡ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿ, ಸರಕಾರದ ಕೆಪಿಟಿಟಿ ನಿಯಮಾವಳಿ ಪ್ರಕಾರ 5 ಲಕ್ಷ ರು.ಗಿಂತಲೂ ಹೆಚ್ಚಿನ ಕಾಮಗಾರಿಗೆ ಇ-ಟೆಂಡರ್ ಮೂಲಕ ಹಾಗೂ 5 ಲಕ್ಷದೊಳಗಿನ ಕಾಮಗಾರಿಗೆ ರಾಜ್ಯದಲ್ಲಿ 1500 ಗ್ರಾಮ ಪಂಚಾಯಿತಿ ಅಧ್ಯಕ್ಷರ ಮಟ್ಟದಲ್ಲಿ ಜಲಾನಯನ ಸಮಿತಿಗಳಿವೆ. ಆ ಸಮಿತಿಯಿಂದ ಒಪ್ಪಿಗೆ ಪಡೆದು ಟೆಂಡರ್ ಕರೆಯಲಾಗುತ್ತದೆ ಎಂದರು.

ಕಳೆದ ಮೂರು ವರ್ಷಗಳಿಂದ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಜಲಾನಯನ ಅಭಿವೃದ್ಧಿ ಯೋಜನೆಯಡಿ 359 ಚೆಕ್ ಡ್ಯಾಂಗಳ ನಿರ್ಮಾಣ ಮಾಡಲಾಗಿದೆ. ಒಂದು ಚೆಕ್ ಡ್ಯಾಂ ನಿರ್ಮಾಣ ಮಾಡಲು ಸ್ಥಳ ಸೂಕ್ತತೆಗನುಗುಣವಾಗಿ ಗರಿಷ್ಠ 5 ಲಕ್ಷದವರೆಗೆ ಅಂದಾಜುಪಟ್ಟಿ ತಯಾರಿಸಲಾಗಿದೆ. ಚೆಕ್ ಡ್ಯಾಂ ನಿರ್ಮಾಣ ಮಾಡಲು ನೀರು ಹರಿದು ಬರುವ ಕ್ಷೇತ್ರವು ಸಾಕಷ್ಟಿರಬೇಕು. ಚೆಕ್ ಡ್ಯಾಂನಲ್ಲಿ ಸಾಕಷ್ಟು ನೀರು ಸಂಗ್ರಹಣೆಗೆ ಅವಕಾಶವಿರಬೇಕು. ಯೋಜನಾ ವ್ಯಾಪ್ತಿಯ ಸಹಾಯಕ ಕೃಷಿ ಅಧಿಕಾರಿಯು ಜಾಗವನ್ನು ಗುರುತಿಸಿ ನಿಯಮಾನುಸಾರ ಅಂದಾಜುಪಟ್ಟಿ ತಯಾರಿಸಿ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಪರಿಶೀಲನೆಯೊಂದಿಗೆ ಮಂಜೂರಾತಿಗಾಗಿ ಉಪ ನಿರ್ದೇಶಕರಿಗೆ ಸಲ್ಲಿಸಲಾಗುತ್ತದೆ ಎಂದು ವಿವರಿಸಿದರು.

## ಭ್ರಷ್ಟಾಚಾರ ರಹಿತ ಚುನಾವಣೆ ನಡೆಯಲಿ

ವಿಧಾನ ಪರಿಷತ್: ದೇಶದಲ್ಲಿ ಭ್ರಷ್ಟಾಚಾರ ಬೇರುಮಟ್ಟಕ್ಕೆ ಇಳಿದಿದ್ದು, ಪ್ರಜಾಪ್ರಭುತ್ವ ವಿನಾಶದ ಅಂಚಿಗೆ ತಲುಪಿದೆ. ಭ್ರಷ್ಟಾಚಾರ ರಹಿತ ಚುನಾವಣೆ ನಡೆಯಬೇಕು. ದೇಶ ಯಾವ ಹಂತ ತಲುಪಿದೆ?, 70 ವರ್ಷ ನಂತರ ನಮ್ಮ ಸಾಧನೆ ಏನು ಎಂದು ನಾವು ಹಿಂತಿರುಗಿ ನೋಡಬೇಕಿದೆ. ಬಾಂಗ್ಲಾದೇಶ, ಪಾಕಿಸ್ತಾನಕ್ಕಿಂತ ಕೆಳಸ್ಥಾನಕ್ಕೆ ಕುಸಿದಿದ್ದು, ಎಲ್ಲಾ ಪಕ್ಷಗಳು ಒಟ್ಟಾಗಿ ದೇಶದ ಪ್ರಗತಿಗೆ ಶ್ರಮಿಸಬೇಕು ಎಂದು ಜೆಡಿಎಸ್ ಸದಸ್ಯ ಶ್ರೀಕಂಠೇಗೌಡ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಕೂಡ ಸಂವಿಧಾನದ ಮೇಲೆ ಚರ್ಚೆ ವೇಳೆ ಮಾತನಾಡಿದ ಅವರು, ಚುನಾವಣೆಯಲ್ಲಿ ಹಣ ಖರ್ಚು ಮಾಡದೇ ಗೆಲುವು ಅಸಾಧ್ಯ. ವಸ್ತುನಿಷ್ಠ ಚುನಾವಣೆಯಲ್ಲಿ ಕೆ.ಆರ್.ಪೇಟೆ ಚುನಾವಣೆ ಒಂದು ಎಂದು ಹೇಳಿದಾಗ, ಆಡಳಿತ ಪಕ್ಷ ಸದಸ್ಯರು ಎದ್ದು ನಿಂತು ಆಕ್ರೋಶ ವ್ಯಕ್ತಪಡಿಸಿದರು. ಮಂಡ್ಯ ಲೋಕಸಭಾ ಚುನಾವಣೆಯಲ್ಲಿ ಯಾರು ಎಷ್ಟು ಖರ್ಚು ಮಾಡಿದ್ದಾರೆ ಗೊತ್ತು ಎಂದು ಬಿಜೆಪಿ ಸದಸ್ಯ ನಾರಾಯಣಸ್ವಾಮಿ ಹೇಳಿದಾಗ ಮೊನ್ನೆ ಉಪ ಚುನಾವಣೆಯಲ್ಲಿ ನೀವೆಷ್ಟು ಖರ್ಚು ಮಾಡಿದ್ದೀರಿ ಎಂದು ರಮೇಶ್ ಗೌಡ ಹಾಗೂ ಟಿ.ಎ.ಶರವಣ ಕೇಳಿದರು. ಗದ್ದಲ ವಾತಾವರಣ ನಿರ್ಮಾಣವಾದಾಗ ಸಚಿವ ಸಿ.ಟಿ. ರವಿ ಸಮಜಾಯಿಷಿ ನೀಡಲು ಮುಂದಾದರು. ಆಗ ಪ್ರತಿಪಕ್ಷ ನಾಯಕರೂ ಸೇರಿದಂತೆ ಹಿಂದಿನ ಚುನಾವಣಾ ವೆಚ್ಚಗಳು ಬೇಡ, ಈಗ ಎಷ್ಟು ಖರ್ಚಾಗುತ್ತೆ ಅಂತ ತಿಳಿಸಿ. 100 ಕೋಟಿ ರು. ವ್ಯಯಿಸುತ್ತಿದ್ದಾರೆ ಎಂದು ಹೇಳಿದರು. ಗದ್ದಲ ಕೆಲಕಾಲ ಮುಂದುವರಿದು, ಆಡಳಿತ, ಪ್ರತಿಪಕ್ಷ ಸದಸ್ಯರು ವಾಕ್ಸಮರ ಮಾಡಿಕೊಂಡರು. ಸಭಾಪತಿಗಳು, ಚುನಾವಣೆ ವಿಚಾರ ಮತ್ತೆ ಮಾತಾಡೋಣ, ಈಗ ಸಂವಿಧಾನ ಮೇಲೆ ಚರ್ಚಿಸಿ ಎಂದರು.



**ದೇಶ ಅಭಿವೃದ್ಧಿ ಆಗಿಲ್ಲ ಎನ್ನುವುದು ಸರಿಯಲ್ಲ. ಸಾಕಷ್ಟು ಕ್ರಾಂತಿಕಾರಿ ಬೆಳವಣಿಗೆ ಆಗಿದೆ. ನಾವು ಇಷ್ಟು ತಿದ್ದುಪಡಿ ಏಕೆ ಬಂತು ಸಂವಿಧಾನಕ್ಕೆ? ಸಂವಿಧಾನದ ಅಳವಡಿಕೆ, ಆಚರಣೆ ಸರಿಯಾಗಿ ಆಗಿಲ್ಲ ಎನ್ನುವುದನ್ನು ಒಪ್ಪಬೇಕಿದೆ. ಸಂವಿಧಾನಕ್ಕೆ ಮೊದಲ ತಿದ್ದುಪಡಿ ತರುವ ಸಂದರ್ಭ ಅಂಬೇಡ್ಕರ್ ಕಣ್ಣೀರು ಹಾಕಿದ್ದರು.**

**-ಗೋವಿಂದ ಕಾರಜೋಳ,**
**ಉಪಮುಖ್ಯಮಂತ್ರಿ**